## ಮೊಬೈಲ್ ಗೀಳು ಬಿಡಿ

ಜ.23ರ ಸಂಚಿಕೆಯಲ್ಲಿ ಗೀತಾ ನೆಲ್ಲೀಕಾಯಿ ಬರೆದ 'ಮೊಬೈಲ್ ಗೀಳು ಬಿಡಿ; ಮಕ್ಕಳತ್ತ ಗಮನಕೊಡಿ' ಲೇಖನ ಓದಿದೆ. ಪ್ರಸ್ತುತ ಸಮಾಜದ ಕೌಟುಂಬಿಕ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಪ್ರತಿಬಿಂಬಿಸುತ್ತಿದೆ. ಪೋಷಕರು ತಮ್ಮ ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿ ನೀಡಲೇಬೇಕಾದ ಪ್ರೀತಿ–ವಾತ್ಸಲ್ಯ ನೀಡಿ, ತಿದ್ದಿ – ತೀಡದಿದ್ದಲ್ಲಿ ದೊಡ್ಡ ಬೆಲೆ ತೆರಬೇಕಾಗುತ್ತದೆ.

–ಮೋಹನರಾಜು ಎಸ್.ಎ., ಶಂಕರಘಟ್ಟ

## ಆ್ಯಸಿಡ್ ದಾಳಿಗೆ ಧಿಕ್ಕಾರ

ಫೆ. 6ರ ಸಂಚಿಕೆಯಲ್ಲಿ ಮಹತಿ ಅವರು ಬರೆದ 'ನಗೆ ಹೂವು ಬಾಡದಿರಲಿ' ಲೇಖನವನ್ನು ಓದುವಾಗ ಮೊದಲಿಗೆ ಕಣ್ಣು ತೇವವಾಯಿತು. ಮುಂದುವರೆದಂತೆ ರಕ್ತ ಕುದಿಯುವಂತಾಯಿತು. ಇಂತಹ ದಾಳಿ ನಡೆಸುವವರು ಖಂಡಿತ ಮಾನವರಲ್ಲ; ರಕ್ಕಸರು. ಇವರಿಗೆ ಎಷ್ಟೇ ವರುಷಗಳ ಜೈಲುವಾಸದ ಶಿಕ್ಷೆ ಕೊಟ್ಟರೂ ಸಾಲದು.

–ಶ್ರೀನಾಥ್ ಕೊನೇಟಿ

'ನಗೆ ಹೂವು ಬಾಡದಿರಲಿ' ಶೀರ್ಷಿಕೆಯೇ ಹೃದಯಕ್ಕೆ ನಾಟುವಂತಿದೆ. ಅದ್ಭುತ ಲೇಖನ.

ಆ್ಯಸಿಡ್ ದಾಳಿಯ ಕ್ರೌರ್ಯವನ್ನು ಮೀರಿ ಬದುಕುತ್ತಿರುವ ನಮ್ಮ ಹೆಣ್ಣುಮಕ್ಕಳು ವೀರ ಸೈನಿಕರಂತೆ ನನಗೆ ಭಾಸವಾಗುತ್ತಿದೆ. ಅವರ ಮೇಲೆ ದೌರ್ಜನ್ಯವೆಸಗಿ ವಿಕೃತ ಖುಷಿ ಅನುಭವಿಸುವ ಈ ಭೀಕರ ಸಮಾಜಕ್ಕೆ ಧಿಕ್ಕಾರವಿರಲಿ. ಮುಂದೆಂದೂ ಯಾರ ಜೀವನದಲ್ಲಿ ಇದು ನಡೆಯದಿರಲಿ. ಈ ಹೆಣ್ಣು ಮಕ್ಕಳ ಮುಂದಿನ ಜೀವನ ಹಸನಾಗಿರಲಿ. ಲೇಖಕರಿಗೊಂದು ದೊಡ್ಡ ಸಲಾಂ

–ವೇದಾ

## ಮಹಿಳಾಪರ ಕಾನೂನು



ಜ. 30 ರಂದು ಮನೆ ಬಾಗಿಲಿಗೆ ಬಂದಿಳಿದ ಸುಧಾಳ ಮುಖಪುಟ ಕುತೂಹಲ ಹುಟ್ಟಿಸಿತು. ಒಳಗಿನ ಆ ಹತ್ತು ಪುಟಗಳಲ್ಲಿ ಸೌಮ್ಯಲಕ್ಷ್ಮೀ ಭಟ್ ಅವರು ಬರೆದ 'ಮಹಿಳಾಪರ ಕಾನೂನು' ಲೇಖನದ ಒಂದೊಂದು ಪುಟಗಳನ್ನು ಓದುತ್ತಾ ಹೋದಂತೆ ಎದೆ ಭಾರವಾಯಿತು. ಹೃದಯ ಕಲಕಿತು.

ಹತ್ತು ಹಲವು ಸಮಸ್ಯೆಗಳ ಸುಳಿಗೆ ಸಿಲುಕಿ ನಲುಗುತ್ತಿರುವ ಮಹಿಳಾ ಲೋಕದ ಮೇಲೆ ಆಗಿರುವ, ಆಗುತ್ತಿರುವ ದಾಳಿಯ ವಿಕೃತ ದೌರ್ಜನ್ಯ ಅತ್ಯಂತ ಕೇಡಿನದು. ಕಾನೂನಿನ ಪುಟಗಳು ಮಹಿಳಾಪರ ಎನ್ನುವ ಮಾತಿಗೆ ಬೆಲೆಯೇ ಇಲ್ಲವೆ? ಹೆಣ್ಣಿನ ಕಣ್ಣೀರಿಗೆ ಕೊನೆಯಿಲ್ಲವೆ? ತಮ್ಮ ದೇಹದ ಮೇಲಾದ ಆ್ಯಸಿಡ್ ದಾಳಿಯನ್ನು ದೂಳಿಗೆ ಸಮ ಎಂದು ಭಾವಿಸಿ, ನೋವಿನ ನಗೆ ಬೀರುತ್ತಲೇ ಹೊಸ ಬದುಕಿಗೆ ತಮ್ಮನ್ನು ತೆರೆದುಕೊಂಡಿರುವ ರೇಷ್ಮ ಖುರೇಷಿ, ಲಕ್ಷ್ಮಿ ಅಗರ್ವಾಲ್ ನಿಜಕ್ಕೂ ಸ್ತುತ್ಯಾರ್ಹರು.

–ಸುಶೀಲಾ ಸೋಮಶೇಖರ, ಹಾಸನ

'ಮಹಿಳಾಪರ ಕಾನೂನು' ಲೇಖನ ತುಂಬ ಚೆನ್ನಾಗಿತ್ತು. ಇಂದಿನ ಸಮಾಜಕ್ಕೆ ಅತಿ ಅಗತ್ಯವಾದ ಅರಿವನ್ನು ಈ ಲೇಖನದ ಮೂಲಕ ನೀಡಿದ್ದೀರಿ. ಪತ್ರಿಕೆ ಮತ್ತು ಲೇಖಕರ ಸಾಮಾಜಿಕ ಜವಾಬ್ದಾರಿಗೆ ವಂದನೆಗಳು. ಇಂಥ ಲೇಖನಗಳು ಹೆಚ್ಚು ಹೆಚ್ಚು ಪ್ರಕಟವಾಗಲಿ.

–ಸದಾಶಿವ, ದಾವಣಗೆರೆ

'ಮಹಿಳಾಪರ ಕಾನೂನು' ಲೇಖನ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪ್ರಕಟವಾಗಿರುವುದು ಸಂದರ್ಭೋಚಿತವಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಕಾನೂನಿನ ಕುರಿತಾದ ಮಾಹಿತಿಗಳು ಸಂಗ್ರಹಯೋಗ್ಯವಾಗಿವೆ. ಜನಸಾಮಾನ್ಯರಿಗೆ ಈ ಮಾಹಿತಿಗಳು ಉಪಯುಕ್ತವಾಗಿವೆ.

–ಕ್ರಿಸ್ತದಯಾಕುಮಾರ್, ತರೀಕೆರೆ

## ರಂಗು ರಂಗಿನ ರಂಗೋಲಿ

ಜ. 30ರ ಸಂಚಿಕೆಯಲ್ಲಿ ಉಮಾ ಅನಂತ್ ಅವರು ಬರೆದ 'ಹೈಡೆಫಿನಿಷನ್ ರಂಗೋಲಿ' ಲೇಖನ ಕುತೂಹಲಕಾರಿಯಾಗಿತ್ತು. ವ್ಯಕ್ತಿಚಿತ್ರಗಳನ್ನು ಯಥಾವತ್ ಆಗಿ ರಂಗೋಲಿಗಳಲ್ಲಿ ಪಡಿಮೂಡಿಸುವ, ನಶಿಸುತ್ತಿರುವ ಈ ಪುರಾತನ ಕಲೆಯನ್ನು ಉಳಿಸಿ ಬೆಳೆಸಿ ಪೋಷಿಸಲು ರಂಗೋಲಿಯಲ್ಲಿ ಹಲವು ಹೊಸತನಗಳನ್ನು ಕಂಡುಕೊಂಡಿರುವ, ಬಾಗಲಕೋಟೆಯ ಅಕ್ಷಯ ಜಾಲಿಹಾಳ ಆಚಾರ್ಯ ಅಭಿನಂದನೀಯರು.

–ಪಿ.ಜಯವಂತ ಪೈ, ಕುಂದಾಪುರ

## ಸಮಕಾಲೀನ ಸ್ಪಂದನದ 'ಸುಧಾ'




'ಸುಧಾ' ವಾರಪತ್ರಿಕೆಯು ವಾರದಿಂದ ವಾರಕ್ಕೆ ಸಾಕಷ್ಟು ಸಮಕಾಲೀನವಾಗುತ್ತಿರುವುದು ಸಂತಸದ ಸಂಗತಿ. ವಿಶೇಷವಾಗಿ ಮುಖಪುಟ ಲೇಖನಗಳು ನಮ್ಮ ಸಮಕಾಲೀನ ಸಮಸ್ಯೆ, ಸವಾಲುಗಳಿಗೆ ಸ್ಪಂದಿಸುತ್ತಿವೆ. ಸಾಮಾನ್ಯರೆಂದು ಭಾವಿಸಲಾದ ಓದುಗರಿಗೆ ಇಷ್ಟವಾಗುವ ವಿವಿಧ ವಿಷಯಗಳ ಜೊತೆಗೆ ಗಂಭೀರ ಸಂಗತಿಗಳಿಗೂ ಪ್ರಧಾನ ಲೇಖನದ ಅವಕಾಶ ಒದಗಿಸುವ ಪ್ರಯತ್ನ ಪ್ರಶಂಸನೀಯವಾದದ್ದು. ನಿರ್ದಿಷ್ಟ ಚೌಕಟ್ಟಿನೊಳಗೆ ಚಿಗುರೊಡೆಯುವ ಜನಪರ ಸ್ಪಂದನೆಯ ಆಶಯಗಳ ಅಭಿವ್ಯಕ್ತಿಗೂ ವೇದಿಕೆಯಾಗುವ ಒಳಹಂಬಲವನ್ನು 'ಸುಧಾ'ದ ಕೆಲವು ಮುಖ್ಯ ಬರಹಗಳಲ್ಲಿ ಕಂಡಿದ್ದೇನೆ. ಅಂತೆಯೇ ಒಂದೆರಡು ಪುಟಗಳನ್ನು ಸಾಮಾಜಿಕ–ರಾಜಕೀಯ ವಿದ್ಯಮಾನಗಳಿಗಾಗಿ ಮೀಸಲಿಡುವ ಕುರಿತೂ ಯೋಚಿಸಬಹುದಾಗಿದೆ. ಈ ಮೂಲಕ ಮುಖ್ಯನೆಲೆಯೊಂದಕ್ಕೆ ನೆಲವಾಗುವುದು ಸಾಧ್ಯವಾಗುತ್ತದೆ.

–ಬರಗೂರು ರಾಮಚಂದ್ರಪ್ಪ, ಬೆಂಗಳೂರು

## ಝಾನ್ಸೆ ಚಾನ್ಸ್

ದಿ 30ರ ಸಂಚಿಕೆಯಲ್ಲಿ ಪ್ರಕಟವಾದ 'ಝಾನ್ಸೆ ಚಾನ್ಸ್' (ಲೇ: ಕೆ.ಪಿ.ಸತ್ಯನಾರಾಯಣ) ಲೇಖನ ಬಹಳ ಚೆನ್ನಾಗಿ ಮೂಡಿಬಂದಿದೆ.

ಆ ಪ್ರದೇಶದ ಬಗ್ಗೆ ಅಚ್ಚರಿಪಡುವಂತಹ ಮಾಹಿತಿಯನ್ನು ನೀಡಿದ್ದಾರೆ. ನಾನು 2018ರಲ್ಲಿ 32 ದಿನಗಳ ಕಾಲ ನೆದರ್‌ಲೆಂಡ್‌ನಲ್ಲಿದ್ದ ಸಮಯದಲ್ಲಿ, ಡಚ್ ಚೀಸ್ ತಯಾರಿಕೆಯಲ್ಲಿ ಪ್ರಖ್ಯಾತಿ ಪಡೆದಿರುವ 'ವೋಲೆಂಡಮ್'ಗೆ ಭೇಟಿ ನೀಡಿದ ಸಮಯದಲ್ಲಿ, ಝಾನ್ಸೆ ಚಾನ್ಸ್‌ನ ಗಾಳಿಯಂತ್ರಗಳು ಹಾಗೂ ಹಲವು ಸ್ಥಳಗಳನ್ನು ವೀಕ್ಷಿಸಿದ ದಿನಗಳು ನೆನಪಾದವು. ಯೂರೋಪಿನ ಹಲವು ದೇಶಗಳನ್ನು ಸುತ್ತಿ ಬಂದಿದ್ದೇನೆ. ನೆದರ್‌ಲೆಂಡ್ ಹಲವು ವಿಶೇಷತೆಗಳನ್ನು ತನ್ನದಾಗಿಸಿಕೊಂಡಿದ್ದು, ಅಸಂಖ್ಯಾತ ಪ್ರವಾಸಿಗರನ್ನು ಆಕರ್ಷಿಸುತ್ತದೆ.

–ಜಿ. ನಾಗೇಂದ್ರ, ಕಾವೂರು, ಮಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in